## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 2891 |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 30/03/2022 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಟೆಂಡರ್ ಗಳಲ್ಲಿ ಭಾಗವಹಿಸಲು ಸರ್ಕಾರ ನಿಗಧಿಪಡಿಸಿದ ಮಾನದಂಡಗಳೇನು; ಈ ಮಾನದಂಡಗಳ ಉದ್ದೇಶಗಳೇನು; | • ರಾಜ್ಯ ಸರ್ಕಾರದ ಅನುದಾನದಲ್ಲಿ ಕೈಗೊಳ್ಳಲಾಗುವ ನಿರ್ಮಾಣ ಕಾಮಗಾರಿಗಳಿಗೆ, ಸಾಮಾಗ್ರಿ ಸರಬರಾಜು, ಸಲಹೆಗಾರರ ನೇಮಕಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000ರನ್ವಯ ಟೆಂಡರ್ ಗಳನ್ನು ಆಹ್ವಾನಿಸಲಾಗುತ್ತಿದ್ದು ಸದರಿ ನಿಯಮಗಳಡಿಯಲ್ಲಿ Standard Bid Document ಗಳನ್ನು ಆರ್ಥಿಕ ಇಲಾಖೆಯು ಅನುಮೋದಿಸಿದ್ದು, ಈ ದಾಖಲಾತಿಗಳನ್ವಯ ಟೆಂಡರ್‌ಗಳನ್ನು ಆಹ್ವಾನಿಸಲಾಗುತ್ತಿದೆ. ಉದ್ದೇಶಿತ ಕಾರ್ಯಕ್ಕೆ ಟೆಂಡರುಗಳನ್ನು ಪಡೆಯಲು ಗುತ್ತಿಗೆದಾರರು ಅರ್ಹರಾಗಬೇಕಾದಲ್ಲಿ ಮುಖ್ಯವಾಗಿ ಈ ಕೆಳಕಂಡ ಮಾನದಂಡಗಳನ್ನು ನಿಗಧಿಪಡಿಸಲಾಗುತ್ತದೆ.<br>1. ನಿಗಧಿಪಡಿಸಿದ ಮೊತ್ತಕ್ಕೆ ಅದೇ ರೀತಿಯ ಕಾಮಗಾರಿ ನಿರ್ವಹಣೆ/ ಸಾಮಾಗ್ರಿ ಸರಬರಾಜನ್ನು ಕೈಗೊಂಡಿರಬೇಕಾಗಿರುತ್ತದೆ.<br>2. ನಿಗಧಿಪಡಿಸಿದ ಮೊತ್ತಕ್ಕೆ ವಾರ್ಷಿಕ ವಹಿವಾಟನ್ನು ಹೊಂದಿರಬೇಕಾಗುತ್ತದೆ. ಹಾಗೂ ಬಿಡ್ ಕೆಪಾಸಿಟಿಯು ಟೆಂಡರು ಆಹ್ವಾನಿಸಿರುವ ಕಾಮಗಾರಿಯ ಮೊತ್ತಕ್ಕಿಂತ ಹೆಚ್ಚಿರಬೇಕಿರುತ್ತದೆ.<br>3. ಬ್ಯಾಂಕಿನಿಂದ ಸಾಲ ಸೌಲಭ್ಯ ಹೊಂದಲು ಅರ್ಹರಿರುವ ಬಗ್ಗೆ ಪ್ರಮಾಣಪತ್ರ ಸಲ್ಲಿಸಬೇಕಾಗುತ್ತದೆ.<br>4. ನಿರ್ಮಾಣ ಕಾಮಗಾರಿಯಾಗಿದ್ದಲ್ಲಿ ಕಾಮಗಾರಿ ನಿರ್ವಹಣೆಗೆ ಅಗತ್ಯವಿರುವ ಯಂತ್ರೋಪಕರಣಗಳನ್ನು ಹೊಂದಿರಬೇಕಾಗುತ್ತದೆ. |

| | | |
|---|---|---|
| | | 5. ಸಲಹೆಗಾರ ಕಾರ್ಯವಾಗಿದ್ದಲ್ಲಿ ಅಗತ್ಯ ವಿದ್ಯಾರ್ಹತೆ ಹೊಂದಿದ ಮಾನವ ಸಂಪನ್ಮೂಲಗಳನ್ನು ಹೊಂದಿರಬೇಕಾಗಿರುತ್ತದೆ.<br><br>• ಲೋಕೋಪಯೋಗಿ ಇಲಾಖೆಯ ಕೆಶಿಪ್ ವತಿಯಿಂದ ಬಾಹ್ಯ ಅನುದಾನಿತ ಯೋಜನೆಗಳ ನೆರವಿನಿಂದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಬಾಹ್ಯ ನೆರವು ನೀಡುವ ಬ್ಯಾಂಕ್‌ಗಳ ಸಾಲದ ಒಡಂಬಡಿಕೆಯಲ್ಲಿನ ಮಾನದಂಡಗಳಂತೆ ಕಾಮಗಾರಿಗಳ ಟೆಂಡರ್‌ಗಳನ್ನು ನಿರ್ವಹಿಸಲಾಗುತ್ತಿದೆ.<br><br>• ಟೆಂಡರುಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಾಮಗಾರಿ ನಿರ್ವಹಣೆಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸುವ ಬಗ್ಗೆ ಖಚಿತಪಡಿಸಿಕೊಳ್ಳಲು ಗುತ್ತಿಗೆದಾರರು ಅನುಭವ ಹೊಂದಿರುವ ಬಗ್ಗೆ ಹಾಗೂ ಆರ್ಥಿಕವಾಗಿ ಸದೃಢವಾಗಿರುವ ಬಗ್ಗೆ ಮಾನದಂಡಗಳನ್ನು ನಿಗಧಿಪಡಿಸಲಾಗುವುದು |
| ಆ) | ಗ್ಲೋಬಲ್ ಟೆಂಡರ್ ಕರೆಯಲು ಕಾರಣಗಳೇನು; ಈ ಕಾರಣಗಳನ್ನು ದೃಢೀಕರಿಸಲು ಇಲ್ಲಿಯವರೆಗಿನ ಟೆಂಡರ್ ಗಳ ಅನುಭವದ ಹಿನ್ನೆಲೆಯಲ್ಲಿ ಮೂಡಿಬಂದಿರುವ ಅಂಶಗಳೇನು; | • ಕೆಟಿಪಿಪಿ ನಿಯಮಗಳನ್ವಯ ಕೆಡಬ್ಲ್ಯೂ -1,2,3,4 ದಾಖಲಾತಿಗಳಂತೆ ಆಹ್ವಾನಿಸುವ ನಿರ್ಮಾಣ ಕಾಮಗಾರಿ ಟೆಂಡರ್‌ಗಳಿಗೆ ಇಲಾಖೆಯಲ್ಲಿ ನೋಂದಾವಣೆಗೊಂಡಿರುವ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗುತ್ತಿದ್ದು, ಗ್ಲೋಬಲ್ ಟೆಂಡರ್ ಆಗಿರುವುದಿಲ್ಲ.<br><br>• ಕೆಶಿಪ್ ವತಿಯಿಂದ ಅನುಷ್ಠಾನಗೊಳಿಸಲಾಗುವ ಯೋಜನೆಗಳಲ್ಲಿ ವಿಶ್ವ ಬ್ಯಾಂಕ್/ಎ.ಡಿ.ಬಿ ಯೊಂದಿಗೆ ಸರ್ಕಾರವು ಮಾಡಿಕೊಳ್ಳಲಾದ ಸಾಲದ ನೆರವಿನ ಕರಾರಿನಂತೆ ಸಾಲ ನೀಡುವ ಬ್ಯಾಂಕ್‌ನ ನಿಯಮಗಳನುಸಾರ ಐ.ಸಿ.ಬಿ (International Competitive Bidding / Global Tender) ಮತ್ತು ಎನ್.ಸಿ.ಬಿ (National Competitive Biddding) ಅಡಿಯಲ್ಲಿ ಟೆಂಡರನ್ನು ಆಹ್ವಾನಿಸಬೇಕಿದೆ.<br><br>• ಐ.ಸಿ.ಬಿ ಮತ್ತು ಎನ್.ಸಿ.ಬಿ ಅಡಿಯಲ್ಲಿ |

| | | |
|---|---|---|
| | | ಟೆಂಡರ್‌ಗಳನ್ನು ಕರೆಯಲು ಯೋಜನೆಗಳನ್ನು ಅಂದಾಜಿನ ಮೊತ್ತದ ಮೇಲೆ ನಿರ್ಧರಿಸಬೇಕಿದ್ದು, ಈ ಕೆಳಕಂಡಂತಿರುತ್ತದೆ.<br>1. **Below $ 40 Million: National Competitive Bidding (NCB)**<br>2. **Above or Equal to $ 40 Million: International Competitive Bidding. (ICB)**<br>• ಕೆಶಿಪ್ ವತಿಯಿಂದ ಇದುವರೆವಿಗೂ 3 ಗ್ಲೋಬಲ್ ಟೆಂಡರುಗಳನ್ನು ಆಹ್ವಾನಿಸಿದ್ದು, ಅಂತಿಮವಾಗಿ ದೇಶೀಯ ಕಂಪನಿಗಳೇ ಅರ್ಹ ಬಿಡ್ಡುದಾರರಾಗಿರುತ್ತಾರೆ. |
| ಇ) | ರಾಜ್ಯದಲ್ಲಿರುವ ಗುತ್ತಿಗೆದಾರರು ಹಾಗೂ ಸಂಸ್ಥೆಗಳು ಟೆಂಡರ್ ನಲ್ಲಿ ಭಾಗವಹಿಸಲು ಅನುವಾಗುವಂತೆ ಯಾವ ರೀತಿಯ ವಿನಾಯಿತಿಗಳನ್ನು ಸರ್ಕಾರ ಘೋಷಿಸಿದೆ; | • ಸಾಮಾನ್ಯ ಟೆಂಡರ್ ದಾಖಲಾತಿಗಳಲ್ಲಿ ನಿಗಧಿಪಡಿಸುವ ಮಾನದಂಡಗಳು ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಎಲ್ಲಾ ಗುತ್ತಿಗೆದಾರರಿಗೂ ಒಂದೇ ತೆರವಾಗಿ ಅನ್ವಯವಾಗಲಿದ್ದು, ರಾಜ್ಯದ ಗುತ್ತಿಗೆದಾರ ಅಥವಾ ಸಂಸ್ಥೆಗಳಿಗೆ ಯಾವುದೇ ವಿನಾಯತಿ ಇರುವುದಿಲ್ಲ. |
| ಈ) | ಬಹುತೇಕ ಗುತ್ತಿಗೆಗಳು ಪಕ್ಕದ ಆಂಧ್ರ ರಾಜ್ಯದವರ ಪಾಲಾಗುತ್ತಿರುವ ಬಗ್ಗೆ ರಾಜ್ಯದ ಗುತ್ತಿಗೆದಾರರ ಆಕ್ರೋಶಕ್ಕೆ ಕಾರಣವಾಗುತ್ತಿರುವುದನ್ನು ತಪ್ಪಿಸಲು ಸರ್ಕಾರದ ಪ್ರಯತ್ನಗಳೇನು? | • ರಾಜ್ಯದ ಗುತ್ತಿಗೆದಾರರಿಗೆ ಹೆಚ್ಚಿನ ಅವಕಾಶಗಳು ಲಭ್ಯವಾಗಲು ಅನುವು ಮಾಡಿಕೊಡುವ ಉದ್ದೇಶದಿಂದ ಹೊರರಾಜ್ಯದ ಗುತ್ತಿಗೆದಾರರಿಗೆ ವಿಶೇಷ ದರ್ಜೆ ಅಡಿಯಲ್ಲಿ ನೋಂದಾವಣೆ ಮಾಡಿ ಸದರಿಯವರು ನಿಗಧಿ ಪಡಿಸಿದ ಮೊತ್ತಕ್ಕಿಂತ ಹೆಚ್ಚಿನ ಮೊತ್ತದ ಕಾಮಗಾರಿಗಳಲ್ಲಿ ಮಾತ್ರ ಭಾಗವಹಿಸಲು ಅನುವಾಗುವಂತೆ, ಕರ್ನಾಟಕ ಲೋಕೋಪಯೋಗಿ ಸಂಹಿತೆ 2014ಕ್ಕೆ ತಿದ್ದುಪಡಿ ತರುವ ಬಗ್ಗೆ ಪರಿಶೀಲಿಸಲಾಗುತ್ತಿದೆ. |

ಸಂಖ್ಯೆ: ಲೋಇ 18 ಬಿಎಲ್ ಕ್ಯೂ 2022

(ಸಿ.ಸಿ. ಪಾಟೀಲ),
ಲೋಕೋಪಯೋಗಿ ಇಲಾಖೆ.